# ಮಕ್ಕಳ ರಕ್ಷಣಾ ಸಮಿತಿ ಮಾಹಿತಿ ಕೈಪಿಡಿ




**ಮಕ್ಕಳ ರಕ್ಷಣಾ ಸಮಿತಿ ಮಾಹಿತಿ ಕೈಪಿಡಿ**

ಗ್ರಾಮ ಮತ್ತು ನಗರ ಸಭೆಯ ವಾರ್ಡ್ ಮಟ್ಟದಲ್ಲಿ
ಮಕ್ಕಳ ರಕ್ಷಣಾ ಸಮಿತಿ ರಚನೆ ಹಾಗೂ
ಅದರ ಕಾರ್ಯಚಟುವಟಿಕೆ ಕುರಿತು ಕೈಪಿಡಿ
ಮಕ್ಕಳ ರಕ್ಷಣಾ ಸಮಿತಿ -
**Child Rights Protection Committee (CRPC)**

## '' ಇಂದಿನ ಮಕ್ಕಳು ಇಂದಿನ ಪ್ರಜೆಗಳು ''

# ಮಕ್ಕಳ ರಕ್ಷಣಾ ಸಮಿತಿ ಮಾಹಿತಿ ಕೈಪಿಡಿ

### ಗ್ರಾಮ ಮತ್ತು ನಗರಸಭೆಯ ವಾರ್ಡ್ ಮಟ್ಟದಲ್ಲಿ
### ಮಕ್ಕಳ ರಕ್ಷಣಾ ಸಮಿತಿ ರಚನೆ ಹಾಗೂ ಅದರ ಕಾರ್ಯಚಟುವಟಿಕೆ
### ಮಕ್ಕಳ ರಕ್ಷಣಾ ಸಮಿತಿ – Child Rights Protection Committee (CRPC)

1. ಈ ಸಮಿತಿಯನ್ನು ಪಂಚಾಯತ್ ರಾಜ್ ತಿದ್ದುಪಡಿ ಕಾಯ್ದೆ 1993 ರಂತೆ ಪರಿಚ್ಛೇದ 61 (ಎ) ಯಂತೆ ಸಾಮಾನ್ಯ ಸಮಿತಿ ಅಡಿಯಲ್ಲಿ ಉಪ ಸಮಿತಿಯಾಗಿ ರಚಿಸುವುದು.
2. ಈ ಸಮಿತಿಯನ್ನು ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಯ ನಿರ್ದೇಶಕರ ಆದೇಶದಂತೆ (9-2-2007 ಮ.ಮ.ಅ.ಇ/ಮ.ಕ./ಮ.ಸಾ.ಸ. 15-6-2007) ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿಯ ಭಾಗವಾಗಿ ಹೆಚ್ಚಿನ ಸದಸ್ಯರನ್ನೊಳಗೊಂಡು ಮಕ್ಕಳ ಸಮಗ್ರ ಅಭಿವೃದ್ಧಿ ಹಾಗೂ ಸಂರಕ್ಷಣೆ ದೃಷ್ಟಿಯಲ್ಲಿ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಕೈಗೆತ್ತಿಕೊಂಡು ಪಂಚಾಯತಿಯಿಂದಲೇ ಬಗೆಹರಿಸಲು ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸುವುದು.

## ಗುರಿ

ಸಂಪೂರ್ಣ ಬಾಲಕಾರ್ಮಿಕ, ಬಾಲ್ಯ ವಿವಾಹ ಮುಕ್ತ ಗ್ರಾಮ ಪಂಚಾಯತಿ / ನಗರಸಭೆಯ ವಾರ್ಡ್‌ನ್ನಾಗಿ ಮಾಡುವುದು ಮತ್ತು ತನ್ನ ಗ್ರಾಮದ / ವಾರ್ಡಿನ ಎಲ್ಲಾ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ಅವರ ಹಕ್ಕನ್ನು ಅವರೇ ಅನುಭವಿಸುವಂತೆ ಮಾಡುವುದು.

## ಉದ್ದೇಶಗಳು

★ ತನ್ನ ಗ್ರಾಮ ಹಾಗೂ ನಗರಸಭೆ ವ್ಯಾಪ್ತಿಯ ವಾರ್ಡ್‌ಗಳ ಮಟ್ಟದಲ್ಲಿ 14 ವರ್ಷದೊಳಗಿನ ಎಲ್ಲಾ ಮಕ್ಕಳು ಶಾಲೆಯಲ್ಲಿರುವಂತೆ ಮಾಡುವುದು.

★ ದುಡಿಮೆ / ಜೀತ / ಕೂಲಿ / ಸಂಬಳ ಮತ್ತು ಮನೆ ಕೆಲಸದಲ್ಲಿರುವ ಎಲ್ಲಾ 14 ವರ್ಷದೊಳಗಿನ ಮಕ್ಕಳನ್ನು ಗುರುತಿಸಿ ದುಡಿಮೆಯಿಂದ ಬಿಡಿಸಿ, ಶಾಲೆಗೆ ಕರೆತರುವುದು.

★ ತನ್ನ ಗ್ರಾಮ ಮಟ್ಟದಲ್ಲಿ ಯಾವುದೇ ಮಹಿಳೆಯರ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ಆಗದಂತೆ ನೋಡುವುದು.

★ ತನ್ನ ಗ್ರಾಮದ / ವಾರ್ಡ್‌ಗಳಲ್ಲಿನ ಎಲ್ಲಾ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಸೌಲಭ್ಯಗಳು ಇರುವಂತೆ ಮಾಡುವುದು.

★ ಬಾಲ್ಯವಿವಾಹ ಮುಕ್ತ ಗ್ರಾಮ ಮಾಡುವುದು.

## ಕಾರ್ಯ ಚಟುವಟಿಕೆ (16 ಅಂಶದ ಕಾರ್ಯಕ್ರಮ)

1. ಸಂಪೂರ್ಣ ''ಬಾಲಕಾರ್ಮಿಕ ಮುಕ್ತ'' ಗ್ರಾಮ / ವಾರ್ಡ್‌ನ್ನಾಗಿ ಮಾಡುವುದು. ಆ ಹಿನ್ನೆಲೆಯಲ್ಲಿ ಚಟುವಟಿಕೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

## ಸಂವಿಧಾನಾತ್ಮಕವಾಗಿ ಮತ್ತು ಮೂಲಭೂತವಾಗಿ : ಮಕ್ಕಳ ಹಕ್ಕುಗಳು

ಪ್ರೀತಿ, ವಿಶ್ವಾಸ, ಬಾಲ್ಯ, ರಕ್ಷಣೆ, ಶಿಕ್ಷಣ, ವಸತಿ, ಮನರಂಜನೆ, ಪೋಷಣೆ, ಆರೋಗ್ಯ, ಪೌಷ್ಠಿಕ, ಆಹಾರ, ಆಟ-ಪಾಠ, ಭಾಗವಹಿಸುವುದು. ಅಭಿಪ್ರಾಯ , ಮೆಚ್ಚುಗೆ , ಅವಕಾಶ , ಸಂತೋಷ, ಕುಟುಂಬದೊಂದಿಗೆ, ಇರುವುದು.

1989 ರ ವಿಶ್ವಸಂಸ್ಥೆಯ ಒಡಂಬಡಿಕೆ ಪ್ರಕಾರ ಮತ್ತು ಅದಕ್ಕೆ 1992 ರಲ್ಲಿ ಡಿಸೆಂಬರ್ 11 ರಂದು ಭಾರತ ಸರ್ಕಾರ ಸಹಿ ಮಾಡಿರುವಂತೆ ಮಕ್ಕಳಿಗೆ ನೀಡಬೇಕಾದ ಹಕ್ಕುಗಳು.

1. ಬದುಕುವ ಹಕ್ಕು 2. ರಕ್ಷಣೆಯ ಹಕ್ಕು 3. ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು 4. ಭಾಗವಹಿಸುವ ಹಕ್ಕು.

### ನಿಮಗೆ ತಿಳಿದಿರಲಿ

1) 1986 ರ ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಪ್ರಕಾರ ಅಪಾಯಕಾರಿ ಕ್ಷೇತ್ರದಲ್ಲಿ ಮಕ್ಕಳ ದುಡಿಮೆ ನಿಷೇಧ, ಒಂದು ವೇಳೆ ದುಡಿಸಿದ್ದಲ್ಲಿ ಮಾಲೀಕರಿಗೆ 10 ಸಾವಿರ ದಂಡ ಮೂರು ವರ್ಷ ಜೈಲು.
2) 1996 ರ ಸುಪ್ರಿಕೋರ್ಟ್ ತೀರ್ಪು ಪ್ರಕಾರ 14 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವುದು ನಿಷೇಧ. ಒಂದು ವೇಳೆ ದುಡಿಸಿದ್ದಲ್ಲಿ ಮಾಲೀಕರಿಗೆ 20 ಸಾವಿರ ದಂಡ.
3) 1997 ರ ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಕಾರ 12 ವರ್ಷದೊಳಗಿನ ಯಾವುದೇ ಮಕ್ಕಳನ್ನು ಯಾವುದೇ ಕಾರಣಕ್ಕೂ ಯಾವುದೇ ಕ್ಷೇತ್ರದಲ್ಲಿ ದುಡಿಸುವುದನ್ನು ನಿಷೇಧಿಸಲಾಗಿದೆ.
4) 1961 ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಪ್ರಕಾರ ಅಂಗಡಿ ಮತ್ತು ವಾಣಿಜ್ಯ ಮಳಿಗೆಗಳಲ್ಲಿ ಮಕ್ಕಳ ಕೆಲಸ ನಿಷೇಧ.
5) ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ರ ಪ್ರಕಾರ 18 ವರ್ಷದೊಳಗಿನ ಹುಡುಗಿಗೆ ಹಾಗೂ 21 ವರ್ಷದೊಳಗಿ ಹುಡುಗರಿಗೆ ಮದುವೆ ಮಾಡುವುದು. ಮಾಡಿಸುವುದು, ಸಾಕ್ಷಿಯಾಗುವುದು ಮತ್ತು ಭಾಗಿಯಾಗುವುದು ಶಿಕ್ಷಾರ್ಹ ಅಪರಾಧ ಪೂಜಾರಿ ಸೇರಿದಂತೆ ಸಂಬಂಧಪಟ್ಟವರಿಗೆಲ್ಲ 1 ಲಕ್ಷರೂ. ದಂಡ ಹಾಗೂ 2 ವರ್ಷ ಜೈಲು.

### ನಿಮಗೆ ಗೊತ್ತಿದೆಯೇ ?

1. ಸಂವಿಧಾನದ ಲೇಖನ 21 ರ ಪ್ರಕಾರ ಎಲ್ಲರಿಗೂ ಬದುಕುವ ಹಕ್ಕು ಇದೆ.
2. ಸಂವಿಧಾನದ ಲೇಖನ 21 ಎ ಪ್ರಕಾರ 6-14 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ಮೂಲಭೂತ ಹಕ್ಕು.
3. ಸಂವಿಧಾನದ ಲೇಖನ 34 ರ ಪ್ರಕಾರ ಪೋಷಕರು ಕುಟುಂಬ ನಡೆಸಲು ಮಕ್ಕಳನ್ನು ಬಳಸಬಾರದು.

4. 1976 ರ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ ಪ್ರಕಾರ ಯಾವುದೇ ಮಕ್ಕಳನ್ನು ನಾಗರಿಕರನ್ನು ಜೀತಕ್ಕೆ / ಸಂಬಳಕ್ಕೆ ಇಡುವಂತಿಲ್ಲ.

5. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ 2009 ರ ಪ್ರಕಾರ 14 ವರ್ಷದೊಳಗಿನ ಎಲ್ಲ ಮಕ್ಕಳು ಕಡ್ಡಾಯವಾಗಿ ಶಿಕ್ಷಣವನ್ನು ಪಡೆಯಲೇಬೇಕು.

## ನಿಮಗೆ ಗೊತ್ತಿರಲಿ

1. ಮಕ್ಕಳನ್ನು ದುಡಿಸುವುದರಿಂದ ಯಾವ ಬಡ ಕುಟುಂಬವೂ ಉದ್ಧಾರವಾಗಿಲ್ಲ.
2. ಬಾಲಕಾರ್ಮಿಕ ಪದ್ಧತಿ ಇರುವುದರಿಂದಲೇ ಬಡತನ, ಅನಕ್ಷರತೆ , ನಿರುದ್ಯೋಗ , ಜನಸಂಖ್ಯೆ ಜಾಸ್ತಿಯಾಗುತ್ತಿದೆ.
3. ಅ'ಶಿಕ್ಷಣ'' ಇರುವುದು ಮತ್ತು ಮಕ್ಕಳನ್ನು ಶಾಲೆಗೆ ಕಳುಹಿಸುವುದು. ಸರ್ಕಾರಿ ಕೆಲಸಕ್ಕೋಸ್ಕರ ಅಲ್ಲ. ಬದಲಾಗಿ ಶೋಷಣೆ, ದೌರ್ಜನ್ಯ, ದಬ್ಬಾಳಿಕೆ, ಮೋಸಗಳಿಗೆ ಬಲಿಯಾಗದೇ ಉತ್ತಮ ನಾಗರಿಕನಾಗಿ ಈ ಸಮಾಜದಲ್ಲಿ ಎಲ್ಲರಂತೆ ಸ್ವಾಭಿಮಾನದಿಂದ ಬದುಕಲು ಹಾಗೂ ಅಭಿವೃದ್ಧಿಗೆ ಹೊಂದಲು.
4. ಒಂದು ವೇಳೆ ನೀವು 14 ವರ್ಷದೊಳಗಿನ ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನು ಬಿಟ್ಟು ಬೇರೆ ಯಾವುದೇ ರೀತಿಯಲ್ಲಿ ಕೆಲಸ. ದುಡಿಮೆ, ಕೂಲಿ, ಸಂಬಳಕ್ಕೆ ಇಟ್ಟಲ್ಲಿ ಪೋಷಕರೇ... ತಂದೆ-ತಾಯಿಯರೇ... ನೀವೂ ಕಾನೂನು ದೃಷ್ಟಿಯಲ್ಲಿ ಅಪರಾಧಿಗಳು ಸಂವಿಧಾನದ ಲೇಖನ 51 (ಎ) (ಕೆ) ಪ್ರಕಾರ ಮಕ್ಕಳನ್ನು ಶಾಲೆಗೆ ಕಳುಹಿಸುವುದು ನಿಮ್ಮ ಕರ್ತವ್ಯ ಮತ್ತು ಜವಾಬ್ದಾರಿ.
5. ಮಾಲೀಕರೇ ... ನೀವೂ ನಿಮ್ಮ ಮನೆ, ಹೊಲ-ಗದ್ದೆ ಅಂಗಡಿ , ಕೈಗಾರಿಕೆ, ಗ್ಯಾರೇಜ್ ಅಥವಾ ಯಾವುದೇ ರೀತಿಯಲ್ಲಿ ಮಕ್ಕಳನ್ನು ದುಡಿಸಿದ್ದಲ್ಲಿ ಅಥವಾ ಯಾವುದೇ ರೀತಿಯಲ್ಲಿ ದುರುಪಯೋಗಪಡಿಸಿದಲ್ಲಿ ಮೇಲೆ ತಿಳಿಸಿದ ಹಲವಾರು ಕಾಯ್ದೆ ನೀತಿ ನಿಮ್ಮನ್ನು ಶಿಕ್ಷಿಸದೇ ಬಿಡಲಾರದು. ಅದಕ್ಕಾಗಿ ಎಲ್ಲಾ ಮಕ್ಕಳಿಗೂ ನಿಮ್ಮ ಮಕ್ಕಳಂತೆ ಪ್ರೀತಿ, ಬಾಲ್ಯ, ಶಿಕ್ಷಣ, ರಕ್ಷಣೆ ನೀಡಿ, ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿ.

ಮಕ್ಕಳ ಸಂರಕ್ಷಣಾ ಯೋಜನೆ

**(EMC Project)**

Aide à l'Enfance de l'Inde

**SPANDANA**
#56, Down Town, 1st Cross,
Rukmini Nagar, Belgaum - 590 016
Ph:0831-2456293, Cell : 9480189322

**Supported by :**
A.E.I. Luxembourg,
Through TDH India Programme, Germany